ಜವಾಬ್ದಾರಿಯನ್ನೆಲ್ಲ ಶಾಂತಾರಾಮ ನೋಡಿಕೊಳ್ಳುತ್ತಿದ್ದ. ಹಾಗಂತ ಅವರು ಸಮಾಧಾನದಲ್ಲಿ ಇರಲಿಲ್ಲ. ಆಗಾಗ, ಯಾರಾದರೂ ಮನೆಗೆ ಬಂದಾಗ ಹಂಗಿಸುತ್ತ, ವ್ಯಂಗ್ಯ ಮಾಡುತ್ತ ಇರುತ್ತಿದ್ದರು. ನೇರವಾಗಿ ಮಾತಾಡುವ, ಕುಳಿತು ಉಣ್ಣುವುದೆಲ್ಲ ಇರಲಿಲ್ಲ. ಇದ್ದರೂ ಒಂದೊ ಸುಮ್ಮನಿರುವುದು, ಇಲ್ಲ ಹಂಗಿಸುವುದು.

ಈ ನಡುವೆ ಕಿರಿಯ ಮಗಳ ಮದುವೆ ನಿಶ್ಚಯವಾಯಿತು. ಆ ಕಾರ್ಯದಲ್ಲಿ ತನ್ಮಯರಾಗಿ ತೊಡಗಿಕೊಳ್ಳಲಿಲ್ಲ. ಮದುವೆಗೆ ಕರೆಯುವ, ಬಂಗಾರ, ಜವಳಿ ತರುವ, ಚಪ್ಪರ ಹಾಕಿಸುವ ಕೆಲಸಗಳನ್ನು ನಿತ್ಯದ ಒಂದು ಕರ್ತವ್ಯ ಎನ್ನುವ ಹಾಗೆ ಮಾಡಿದ್ದರು. ನಂತರ ಶಂಭುವಿನ ನೌಕರಿಯ ಸಂದರ್ಭದಲ್ಲೂ ಓಡಾಡಿದರು. ಆದರೆ, ಮನೆಯ ಎಲ್ಲ ವ್ಯವಹಾರ ನೋಡಿಕೊಳ್ಳುವ ಹಿರಿಯ ಮಗ ಶಾಂತಾರಾಮನಿಂದ, ಬೇರೆ ಯಾರಿಗೊ ಓಡಾಡುವ ಹಾಗೆ ದುಡ್ಡು ತೆಗೆದುಕೊಂಡರು. ಅವರಿಗೆ ಎಲ್ಲ ಪಕ್ಷದ ಮುಖಂಡರ ಜೊತೆ ಹತ್ತಿರದ ಸಂಬಂಧವಿತ್ತು ಮತ್ತು ಯಾರನ್ನೂ ಕ್ಯಾರ್ ಮಾಡದೆ ಕೇಳುವ ದಾಢ್ಯತನವಿತ್ತು. ಅವರು, ಆರಂಭದ ರಾಜಕೀಯ ಜೀವನದಲ್ಲಿ ಹಣದ ಬಗ್ಗೆ ಯೋಚಿಸಿರಲಿಲ್ಲ. ನಂತರ ಅವರಿಗೆ ಯಾರ, ಯಾವುದರ ಮೇಲೂ ಮಮಕಾರ ಇದ್ದಂತಿರಲಿಲ್ಲ. ಎಲ್ಲವನ್ನೂ ರಾಜಕೀಯ ವ್ಯವಹಾರದಂತೆ ನೋಡುತ್ತಿದ್ದಂತಿತ್ತು. ಈಗ ಅವರ ವರ್ತನೆ ಬದಲಾಗಿತ್ತು. ತಾವು ಮಾಡಿಸಿಕೊಡುವ ಕೆಲಸಗಳಿಗೆ ಲಂಚ ತೆಗೆದುಕೊಳ್ಳಲೂ ಸರಿಯಾಗಿ ಬರುತ್ತಿರಲಿಲ್ಲ! ಹೆಚ್ಚು ದುಡ್ಡು ಕೊಟ್ಟು ಮಾಡಿಸಬೇಕಾದ ಕೆಲಸಕ್ಕೆ ಕಡಿಮೆ ದುಡ್ಡು ಕೇಳಿ ಫಜೀತಿಗೆ ಬೀಳುತ್ತಿದ್ದರು. ನಂತರ ದುಡ್ಡು ಕೊಟ್ಟವರು, 'ಇವನಿಗೆ ಲಂಚ ಕೊಟ್ಟಿದ್ದೇನೆ...' ಎಂದು ಹೇಳಿಕೊಂಡು ತಿರುಗುತ್ತಿದ್ದರು. ಅದನ್ನೇನು ಅವರು ಹಚ್ಚಿಕೊಳ್ಳುತ್ತಿರಲಿಲ್ಲ, ಆ ಪ್ರಶ್ನೆ ಬೇರೆ. ಆಗಲೇ ಅವರು ಬದುಕಿನ ಎಲ್ಲ ಆರ್ದ್ರತೆಯನ್ನು ಕಳೆದುಕೊಂಡಂತಿದ್ದರು. ಚುನಾವಣೆ ಬಂದರೆ, ಯಾವ ಪಕ್ಷದವರು ಕರೆದರೂ ಹೋಗುತ್ತಿದ್ದರು. ದುಡ್ಡು, ಕಾರು ಕೊಟ್ಟರಾಯಿತು. ಅವರು ಆರಿಸಿ ಬರಬೇಕು, ಬರಬಾರದು ಎರಡೂ ಅವರಿಗೆ ಇರಲಿಲ್ಲ. ಒಂದು ಕಾಲದಲ್ಲಿ, ಪಕ್ಷದ ಪ್ರಚಾರವನ್ನು ಜೀವನ್ಮರಣ ಸಂಗತಿ ಎಂಬಂತೆ ಮಾಡುತ್ತ, ಜನರನ್ನು ಹುಚ್ಚೆಬ್ಬಿಸುವಂತೆ ಭಾಷಣ ಮಾಡುತ್ತಿದ್ದ ಅವರ ಮಾತುಗಳೀಗ ಸಾಮಾನ್ಯ ಮನರಂಜನೆಯ ಮಟ್ಟಕ್ಕೆ ಇಳಿದಿತ್ತು.

ಹೀಗೆ ಕೈ ಕಾಲು ಗಟ್ಟಿಯಿರುವವರೆಗೆ ಏನೇನೊ ಮಾಡಿ, ಏನೇನೊ ಹೇಳಿ ಈಗ ಎಲ್ಲದರಲ್ಲೂ ಭ್ರಮನಿರಸನಗೊಂಡಂತಿದ್ದರು...

ಅವರು ದಾಟಿದ ವಯಸ್ಸನ್ನು ಶಂಭುವೂ ಈಗ ದಾಟುತ್ತಿದ್ದ. ನಗರದಲ್ಲಿ ನೌಕರಿ ಮಾಡಿಕೊಂಡಿರುವ ಆತನಿಗೆ ಸಣ್ಣಂದಲೂ ಚಿತ್ರ ಬಿಡಿಸುವ ಹವ್ಯಾಸ. ಶಾಲೆಯ ಪಟ್ಟಿಯ ಮೇಲೆ, ಪುಸ್ತಕಗಳ ಮೇಲೆ ಕಂಡಕಂಡದ್ದನ್ನು ಬಿಡಿಸುತ್ತಿದ್ದ. ದೊಡ್ಡವನಾದಂತೆ ಇದರಲ್ಲಿ ತಾನು ಏನಾದರೂ ಸಾಧಿಸಬೇಕೆಂಬ ಬಯಕೆ. ಸಿಕ್ಕ ದೊಡ್ಡ ಕಲಾವಿದರ ಚಿತ್ರ ನೋಡಿದ. ಕೆಲವು ತರಬೇತಿಗಳಿಗೂ ಹೋಗಿಬಂದ. ಪತ್ರಿಕೆಗಳಲ್ಲಿ ಕೆಲವು ಪ್ರಕಟವಾದವು. 'ಅಡ್ಡಿಲ್ಲ' ಎಂದು ಕೆಲವರು ಹೊಗಳಿದರು. ಮುಂದೆ ಯಾಕೊ ಏನೊ ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ. ಅವನಲ್ಲಿ ವಿಚಿತ್ರವಾದ ಹತಾಶೆ ಆವರಿಸುತ್ತಿತ್ತು. ಇದರಲ್ಲಿ ಏನೋ ಸಾಧಿಸುವುದು, ಪ್ರಶಸ್ತಿ ಪುರಸ್ಕಾರ ಪಡೆಯುತ್ತೇನೆ ಎನ್ನುವುದು ಆಕಾಶಕ್ಕೆ ಇಟ್ಟ ಏಣಿಯ ಹಾಗೆ ಕಾಣುತ್ತಿತ್ತು. ಕಾಲೇಜಿನಲ್ಲಿ ಓದುತ್ತಿದ್ದಾಗ ಕಾರ್ಯಕ್ರಮವೊಂದಕ್ಕೆ ಕಲಾವಿದರೊಬ್ಬರು ಬಂದಿದ್ದರು. ಅವರ ಹತ್ತಿರ ಪಟ್ಟಿಯ ಮೇಲೆ ಹಸ್ತಾಕ್ಷರ ಪಡೆಯಲು ಹೋದ. ಅವರು ಬರೀ ಸಹಿ ಮಾಡಲು ಮುಂದಾದಾಗ, 'ಸರ್ ಏನಾದರೂ ಬರೆದು ಕೊಡಿ' ಎಂದ. ಅವರು, 'ಕಲೆ ಎಲ್ಲರನ್ನು ಆಕರ್ಷಿಸುತ್ತದೆ. ಕೆಲವರನ್ನು